892(1289) ಶ್ರೀ ಕೃಷ್ಣಮೂರ್ತಿ ಕೆ ಎಂ (ಕಡೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿ ಗಣಿ ವಾಹನಗಳು ಚಲಿಸುತ್ತಿರುವುದರಿಂದ ಹಾಳಾಗಿರುವ ಅಲ್ಲಿನ ರಸ್ತೆಗಳ ಸುಧಾರಣೆ ಮಾಡಲು ಸರ್ಕಾರ ಆರ್ಥಿಕ ಸಹಾಯ ಮಾಡಲಿದೆಯೇ,

ಆ) ಕಡೂರು ವಿದಾನ ಸಭಾ ಕ್ಷೇತ್ರಕ್ಕೆ NABARD ಮತ್ತು CRF ಯೋಜನೆಯಡಿ ಎಷ್ಟು ಆರ್ಥಿಕ ನೆರವನ್ನು ಒದಗಿಸಲಾಗಿದೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಡೂರು ವಿಧಾನಸಭಾ ವ್ಯಾಪ್ತಿಯಲ್ಲಿನ ಲೋಕೋಪಯೋಗಿ ಇಲಾಖೆ ರಸ್ತೆಗಳಲ್ಲಿ ಗಣಿ ವಾಹನಗಳು ಚಲಿಸುತ್ತಿರುವ ರಸ್ತೆಗಳ ಸುಧಾರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ

ಆ) ಕಡೂರು ವಿಧಾನಸಭಾ ಕ್ಷೇತ್ರದಲ್ಲಿ ನಬಾರ್ಡ್ ಮತ್ತು ಸಿಆರ್ಎಫ್ ಯೋಜನೆಯಡಿ ಒದಗಿಸಿದ ಆರ್ಥಿಕ ನೆರವು ಈ ಕೆಳಕಂಡಂತಿದೆ

1) ನಬಾರ್ಡ್ ರೂ 611 96 ಕೋಟಿ

2) ಕೇಂದ್ರ ರಸ್ತೆ ಯೋಜನೆಯಡಿ ರೂ 100 ಕೋಟಿ

893(896) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳಗಾವಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಮಧುಗಿರಿ ಪಟ್ಟಣದಲ್ಲಿ ಕೆಎಸ್ಆರ್ಟಿಸಿ ಬಸ್ ಡಿಪೋ ಪ್ರಾರಂಭಿಸಲು ಸಾರ್ವಜನಿಕರಿಂದ ಬೇಡಿಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ

ಆ) ಮಧುಗಿರಿ ತಾಲ್ಲೂಕು ಸಂಪೂರ್ಣವಾಗಿ ರಾಷ್ಟ್ರೀಕೃತವಾಗಿರುವುದಿಲ್ಲ ಸದರಿ ತಾಲ್ಲೂಕಿನಲ್ಲಿ ಖಾಸಗಿಯವರು ಹೇರಳವಾಗಿ ತಮ್ಮ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುತ್ತಿದ್ದಾರೆ ಆದುದರಿಂದ, ಮಧುಗಿರಿಯಲ್ಲಿ ಘಟಕ ಸ್ಥಾಪಿಸುವ ಅವಶ್ಯಕತೆಯಿಲ್ಲ

894(897) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?